

ಚಾರ್ಲ್ಸ್ ಡಾರ್ವಿನ್‌ನ
ನೆನಪುಗಳ 'ಡೌನ್ ಹೌಸ್'

# ಡೌನ್ ಹೌಸ್

## ಡಾರ್ವಿನ್ ಮಹಾಶಯನ ಅಂಗಳ-ಹಿತ್ತಲಿನಲ್ಲಿ

**ವಿಕಾಸವಾದದ ಸಿದ್ಧಾಂತವನ್ನು ಪ್ರತಿಪಾದಿಸಿದ ವಿಶ್ವದ ಮಹಾನ್ ವಿಜ್ಞಾನಿ ಚಾರ್ಲ್ಸ್ ಡಾರ್ವಿನ್‌ನ ಸ್ಮೃತಿಚಿತ್ರಗಳು ಲಂಡನ್ ಸಮೀಪದ ಕೆಂಟ್ ಪ್ರದೇಶದಲ್ಲಿವೆ. ಡಾರ್ವಿನ್‌ನ ಮನೆಯಲ್ಲಿ ಓಡಾಡಿದರೆ, ಆತನ ಬದುಕು ಹಾಗೂ ಸಾಧನೆಯ ಔನ್ನತ್ಯಗಳು ಮಧುರ ನೆನಪುಗಳಾಗಿ ಆವರಿಸಿಕೊಳ್ಳುತ್ತವೆ.**

■ **ಸಿಡ್ನಿ ಶ್ರೀನಿವಾಸ್**

'ನೈಸರ್ಗಿಕ ಆಯ್ಕೆ', 'ವಿಕಾಸವಾದ' ಮೊದಲಾದ ಹೊಸ ವಿಚಾರಗಳನ್ನು ನಮ್ಮ ಮುಂದೆ ಇಟ್ಟು ನಮ್ಮ ಆಲೋಚನಾ ವಿಧಾನವನ್ನೇ ಬದಲಾಯಿಸಿದ ಧೀಮಂತ ವಿಜ್ಞಾನಿ ಚಾರ್ಲ್ಸ್ ಡಾರ್ವಿನ್. ಆತನಿಂದಾಗಿ 'ವಿಕಾಸ', 'ಸರ್ವೈವಲ್ ಆಫ್ ದಿ ಫಿಟ್ಟೆಸ್ಟ್' (Survival of the fittest), 'ಅಸ್ತಿತ್ವಕ್ಕಾಗಿ ಸಾಹಸ' (Fight for survival) ಮೊದಲಾದ ವಾಕ್ಯಗಳು ನಮ್ಮ ಅಳತೆಗೆ ನಿಲುಕಿದವು.

ಲಂಡನ್ ಮಹಾನಗರದ ಹತ್ತಿರ ಇರುವ ಕೆಂಟ್ ಪ್ರದೇಶದಲ್ಲಿದೆ ಡಾರ್ವಿನ್‌ನ ಮನೆ, 'ಡೌನ್ ಹೌಸ್'. ಹಿಂದೊಮ್ಮೆ ನೋಡಿದ್ದೆವು. ಹಿಂದಿನಂತೆ ಈ ಬಾರಿ ಎರಡು ಟ್ರೈನ್ ಮತ್ತು ಟ್ಯಾಕ್ಸಿಗಳನ್ನು ಹಿಡಿಯುವ ಪ್ರಮೇಯವಿರಲಿಲ್ಲ. ನಮ್ಮ ಸಾರಥಿ ಶಾನ್ ಸಿದ್ಧನಿದ್ದು, ಕಾರಿನಲ್ಲಿ ನಮ್ಮನ್ನು ಕೊಂಡೊಯ್ದ. ಒಂದು ಗಂಟೆಗೂ ಹೆಚ್ಚಿನ ಪ್ರಯಾಣ. ಎಳೆ ಬಿಸಿಲು ಬೇರೆ. ಭೇಟಿ ಆಹ್ಲಾದಕರವಾಗಿತ್ತು.

ಮನೆಯನ್ನು ಪ್ರವೇಶಿಸಿದ ಕೂಡಲೇ ಎಲ್ಲರ ಮನ ಸೆಳೆಯುವುದು ಮಹಡಿಯ ಮೆಟ್ಟಿಲು. ತನ್ನ ಮಕ್ಕಳು ಆಟವಾಡುವ ಸಲುವಾಗಿ ಡಾರ್ವಿನ್ ಅವುಗಳ ಮೇಲೆ ಹಲಗೆಯೊಂದನ್ನಿರಿಸಿ ಜಾರುಬಂಡೆಯನ್ನು ನಿರ್ಮಿಸಿದ್ದ. ಮಕ್ಕಳೆಂದರೆ ಅವನಿಗೆ ಮತ್ತು ಅವನ ಹೆಂಡತಿ ಎಮ್ಮಾ ಇಬ್ಬರಿಗೂ ಬಹು ಪ್ರೀತಿ.

ಪಕ್ಕದಲ್ಲಿ ಅವನ ವ್ಯಾಸಂಗ ಕೊಠಡಿ. ವಿಶಾಲವಾದದ್ದು. ಗೋಡೆಯ ಮೇಲೆ ತನ್ನ ಗುರುವರೇಣ್ಯ ಹೆನ್ ಸ್ಲೋ, ಮಾವನ ತಂದೆ ಜೋಸಿಯಾ ವೆಡ್ಜ್ ವುಡ್ ಅವರ ಚಿತ್ರಗಳು. ಎಲ್ಲೆಲ್ಲೂ ಪುಸ್ತಕಗಳು. ಮೇಜಿನ ಮೇಲೆ

